**All India Radio: Bangalore**
**National Bulletin In Kannada**
**31.08.2025 7.35 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.08.2025 7.35 p.m.**

**<><><><>**

ಮುಖ್ಯಾಂಶಗಳು :

೧. ಇಂಜಿನಿಯರ್‌ಗಳು ಕನಸುಗಳನ್ನು ನನಸಾಗಿಸುವ ಶ್ರಮಯೋಗಿಗಳು; ಮನ್ ಕಿ ಬಾತ್ ೧೨೫ನೇ ಆವೃತ್ತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮತ

೨. ಭಾರತ - ಚೀನಾ ಅಭಿವೃದ್ಧಿ ಪಾಲುದಾರರೇ ಹೊರತು ಸ್ಪರ್ಧಿಗಳಲ್ಲ ; ಉಭಯ ದೇಶಗಳ ನಾಯಕರ ಸ್ಪಷ್ಟನೆ

೩. ನಾಳೆ ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ವಜ್ರಮಹೋತ್ಸವದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗಿ

೪. ಮೇಘಸ್ಫೋಟ ಹಾನಿ ಪರಿಶೀಲಿಸಲು ನಾಳೆ ಗೃಹ ಸಚಿವ ಅಮಿತ್ ಶಾ ಜಮ್ಮುಗೆ ಭೇಟಿ

><><><><><><><><

ಇಂಜಿನಿಯರ್‌ಗಳು ಕೇವಲ ಯಂತ್ರವನ್ನು ತಯಾರಿಸುವುದಿಲ್ಲ, ಅವರು ಕನಸುಗಳನ್ನು ನನಸಾಗಿ ಬದಲಾಯಿಸುವ ಶ್ರಮಯೋಗಿಗಳಾಗಿರುತ್ತಾರೆ. ಭಾರತದ ಪ್ರತಿಯೊಬ್ಬ ಇಂಜಿನಿಯರ್‌ಗೂ ಕೃತಜ್ಞತೆ ಅರ್ಪಿಸುವುದಾಗಿ ಹಾಗೂ ಅವರಿಗೆ ಶುಭಾಶಯಗಳನ್ನು ಕೋರುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಆಕಾಶವಾಣಿಯ ಜನಪ್ರಿಯ ಮನ್ ಕಿ ಬಾತ್ ಕಾರ್ಯಕ್ರಮದ ೧೨೫ನೇ ಆವೃತ್ತಿಯಲ್ಲಿ ದೇಶ ವಿದೇಶದಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಅವರು, ಸೆಪ್ಟೆಂಬರ್ ೧೫ ರಂದು ಭಾರತದ ಮಹಾನ್ ಇಂಜಿನಿಯರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜನ್ಮದಿನವಾಗಿದ್ದು, ಈ ದಿನವನ್ನು ಅಭಿಯಂತರರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ತಿಳಿಸಿದರು. ತಮ್ಮ ಭಾಷಣದಲ್ಲಿ ಸೂರತ್ ನಿವಾಸಿ ಜಿತೇಂದ್ರ ಸಿಂಗ್ ರಾಠೋಡ್ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, ಹಲವು ವರ್ಷಗಳಿಂದ ಅವರು, ದೇಶ ಸೇವೆಯಲ್ಲಿ ತಮ್ಮ ಪ್ರಾಣತ್ಯಾಗ ಮಾಡಿದ ಎಲ್ಲಾ ಸೈನಿಕರ ಬಗ್ಗೆ ಮಾಹಿತಿಯನ್ನು ಕಲೆಹಾಕಿದ್ದಾರೆ. ಇಂದು ಅವರ ಬಳಿ ಮೊದಲ ಮಹಾಯುದ್ಧದಿಂದ ಹಿಡಿದು ಈಗಿನವರೆಗೆ ಹುತಾತ್ಮರಾದ ಸಾವಿರಾರು ವೀರ ಯೋಧರ ಕುರಿತ ಮಾಹಿತಿ ಲಭ್ಯವಿದೆ. ಆತನ ಬಳಿ ಹುತಾತ್ಮ ಯೋಧರ ಸಾವಿರಾರು ಚಿತ್ರಪಟಗಳೂ ಇವೆ ಎಂದು ತಿಳಿಸಿದರು. ಸೌರ ಶಕ್ತಿಯಿಂದ ರೈತರ ಜೀವನ ಕೂಡಾ ಬದಲಾಗುತ್ತಿದೆ. ಈ ಬದಲಾವಣೆ ಸೌರ ಪಂಪ್ ನಿಂದ ಮತ್ತು ಸೌರ ಶಕ್ತಿಯಿಂದ ನಡೆಯುವ

ಅಕ್ಕಿ ಗಿರಣಿಯಿಂದ ಬಂದಿದೆ. ಇಂದು ದೇಶದ ಅನೇಕ ರಾಜ್ಯಗಳಲ್ಲಿ ಸೌರ ಶಕ್ತಿಯಿಂದ ನಡೆಯುವ ಸಾವಿರಾರು ಅಕ್ಕಿ ಗಿರಣಿಗಳನ್ನು ಸ್ಥಾಪಿಸಲಾಗಿದೆ. ಈ ಸೋಲಾರ್ ಅಕ್ಕಿ ಗಿರಣಿಗಳು ರೈತರ ಆದಾಯದೊಂದಿಗೆ ಅವರ ಮುಖದಲ್ಲಿ ಸಂತಸದ ಹೊಳಪನ್ನು ಕೂಡಾ ಹೆಚ್ಚಿಸಿವೆ ಎಂದು ಹೇಳಿದರು. ಸೆಪ್ಟೆಂಬರ್ ೧೭ ರಂದು ವಿಶ್ವಕರ್ಮ ಜಯಂತಿ. ಈ ದಿನವನ್ನು ನಮ್ಮ ವಿಶ್ವಕರ್ಮ ಬಾಂಧವರಿಗೆ ಸಮರ್ಪಿಸಲಾಗಿದೆ, ಅವರು ಸಾಂಪ್ರದಾಯಿಕ ಕರಕುಶಲ ವಸ್ತುಗಳು, ಕೌಶಲ್ಯ ಮತ್ತು ಜ್ಞಾನವನ್ನು ನಿರಂತರವಾಗಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ರವಾನಿಸುತ್ತಿದ್ದಾರೆ. ನಮ್ಮ ಬಡಗಿಗಳು, ಕಮ್ಮಾರರು, ಅಕ್ಕಸಾಲಿಗರು, ಕುಂಬಾರರು, ಶಿಲ್ಪಿಗಳು, ಬಡಗಿಗಳು ಯಾವಾಗಲೂ ಭಾರತದ ಸಮೃದ್ಧಿಯ ಅಡಿಪಾಯವಾಗಿದ್ದಾರೆ. ನಮ್ಮ ಈ ವಿಶ್ವಕರ್ಮ ಸೋದರರಿಗೆ ನೆರವು ನೀಡಲು ಸರ್ಕಾರವು ವಿಶ್ವಕರ್ಮ ಯೋಜನೆಯನ್ನು ಕೂಡಾ  ಪ್ರಾರಂಭಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮನ್ ಕಿ ಬಾತ್ ನಲ್ಲಿ ವಿವರಿಸಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( 23 ಸೆಕೆಂಡುಗಳು)**

ಮುಂದಿನ ತಿಂಗಳು ದೇಶವು ಹೈದರಾಬಾದ್ ವಿಮೋಚನಾ ದಿನವನ್ನು ಆಚರಿಸಲಿದೆ ಎಂದು ಪ್ರಸ್ತಾಪಿಸಿದ ಅವರು, ಅಪರೇಷನ್ ಪೊಲೋದಲ್ಲಿ ಪಾಲ್ಗೊಂಡ ವೀರರ ಸಾಹಸ ಸದಾ ಸ್ಮರಣೀಯ ಎಂದರು. ಇದಕ್ಕೂ ಮುನ್ನ ಅವರು, ಉಕ್ಕಿನ ಮನುಷ್ಯ ಸರ್ಧಾರ್ ವಲ್ಲಭಭಾಯಿ ಪಟೇಲ್ ಅವರ ೧೯೪೭ರ ಧ್ವನಿಮುದ್ರಣವನ್ನು  ಕೇಳುಗರೊಂದಿಗೆ ಹಂಚಿಕೊಂಡರು. ಈ ಸಂದರ್ಭ ಸರ್ದಾರ್ ಪಟೇಲ್ ಅವರು 'ಆಪರೇಷನ್ ಪೊಲೋ' ಮೂಲಕ ಹೈದರಾಬಾದ್‌ನನ್ನು ಭಾರತದೊಂದಿಗೆ ಏಕೀಕೃತಗೊಳಿಸುವಲ್ಲಿ ನಿರ್ಣಾಯಕ  ಪಾತ್ರವಹಿಸಿದ್ದರು ಎಂದು ಪ್ರಧಾನಿ ಸ್ಮರಿಸಿದರು.

**ಧ್ವನಿ : ಪ್ರಧಾನಿ ನರೇಂದ್ರ ಮೋದಿ, ( 34 ಸೆಕೆಂಡುಗಳು)**

><><><><><><><

ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಘಟನೆ ಶೃಂಗಸಭೆಯ ಹಿನ್ನೆಲೆಯಲ್ಲಿ ಭೇಟಿಯಾದ ಭಾರತ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾದ ಅಧ್ಯಕ್ಷ ಕ್ಷಿ ಜಿನ್‌ಪಿಂಗ್ ಅವರು ಇಂದು ಭಾರತ ಮತ್ತು ಚೀನಾ ಅಭಿವೃದ್ಧಿ ಪಾಲುದಾರರಾಗಿದ್ದು, ಸ್ಪರ್ಧಿಗಳು ಅಲ್ಲ ಎಂದು ಪುನರುಚ್ಚರಿಸಿ, ಎರಡು ದೇಶಗಳ ನಡುವಿನ ಭಿನ್ನತೆಗಳು ವಿವಾದಗಳಾಗಬಾರದು ಎಂಬುದು ಅವರ ಸಾಮಾನ್ಯ ನಿಲುವು ಎಂದು ಸ್ಪಷ್ಟಪಡಿಸಿದರು.  ಪ್ರಧಾನಮಂತ್ರಿ ಮೋದಿ ಅವರು, ದ್ವಿಪಕ್ಷೀಯ ಸಂಬಂಧಗಳ ನಿರಂತರ ಅಭಿವೃದ್ಧಿಗೆ ಗಡಿಭಾಗಗಳಲ್ಲಿ ಶಾಂತಿ ಮತ್ತು ಸ್ಥಿರತೆ ಅತ್ಯಗತ್ಯವೆಂದು ಒತ್ತಾಯಿಸಿದರು. ಕಳೆದ ವರ್ಷ ನಡೆದ ಯಶಸ್ವಿ ಹಿಂತೆಗೆತ ಹಾಗೂ ಆ ಬಳಿಕ ಗಡಿಭಾಗಗಳಲ್ಲಿ ಶಾಂತಿ ಮತ್ತು ಸ್ಥಿರತೆಯು ಕಾಯ್ದುಕೊಳ್ಳಲ್ಪಟ್ಟಿರುವ ಬಗ್ಗೆ ಇಬ್ಬರು ನಾಯಕರೂ ತೃಪ್ತಿಯನ್ನು ವ್ಯಕ್ತಪಡಿಸಿದರು.  ದ್ವಿಪಕ್ಷೀಯ ಸಂಬಂಧಗಳ ರಾಜಕೀಯ ದೃಷ್ಟಿಕೋನ ಹಾಗೂ ಜನರ ದೀರ್ಘಕಾಲೀನ ಹಿತದೃಷ್ಟಿಯಿಂದ ಗಡಿ ಪ್ರಶ್ನೆಗೆ ನ್ಯಾಯಯುತ, ಸಮಂಜಸ ಮತ್ತು ಪರಸ್ಪರ ಒಪ್ಪಿಗೆಯ ಆಧಾರಿತ ಪರಿಹಾರ ಹುಡುಕುವ ಸಂಕಲ್ಪವನ್ನೂ ವ್ಯಕ್ತಪಡಿಸಿದರು. ಈ ತಿಂಗಳು ಆರಂಭದಲ್ಲಿ ಎರಡು ದೇಶಗಳ ವಿಶೇಷ ಪ್ರತಿನಿಧಿಗಳ ಸಭೆಯಲ್ಲಿ ತೆಗೆದುಕೊಳ್ಳಲಾದ ಮಹತ್ವದ ನಿರ್ಧಾರಗಳನ್ನು ಗುರುತಿಸಿ, ಅವರ ಪ್ರಯತ್ನಗಳಿಗೆ ಇನ್ನಷ್ಟು ಬೆಂಬಲ ನೀಡಲು ಒಪ್ಪಿಗೆ ಸೂಚಿಸಿದರು.   ಕೈಲಾಸ ಮಾನಸ ಸರೋವರ

ಯಾತ್ರೆಯ ಪುನರಾರಂಭ ಮತ್ತು ಪ್ರವಾಸಿ ವೀಸಾ ನೀಡುವ ಕ್ರಮಗಳ ಪ್ರಯತ್ನಗಳನ್ನು ವಿಸ್ತರಿಸಲು ಒಮ್ಮತ ವ್ಯಕ್ತವಾಯಿತು. ಆರ್ಥಿಕ ಮತ್ತು ವ್ಯಾಪಾರ ಸಂಬಂಧಗಳ ವಿಷಯದಲ್ಲಿ, ವಿಶ್ವ ವ್ಯಾಪಾರದ ಸ್ಥಿರತೆಗೆ ಭಾರತ ಮತ್ತು ಚೀನಾ ಎರಡೂ ಆರ್ಥಿಕತೆಗಳ ಪಾತ್ರವನ್ನು ಗುರುತಿಸಲಾಯಿತು.

ಭಾರತ-ಚೀನಾ ನಡುವೆ ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಜಾಗತಿಕ ಮಟ್ಟದ ಸಮಸ್ಯೆಗಳು ಮತ್ತು ಸವಾಲುಗಳ ಕುರಿತು ನ್ಯಾಯಸಮ್ಮತ ವ್ಯಾಪಾರ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ಸಹಕಾರವನ್ನು ವಿಸ್ತರಿಸುವ ಅಗತ್ಯವಿದೆ ಎಂಬ ನಿಲುವಿಗೆ ಎರಡೂ ನಾಯಕರು ಒಪ್ಪಿಗೆ ನೀಡಿದರು. ಪ್ರಧಾನಮಂತ್ರಿ ಮೋದಿ ಅವರು ಚೀನಾದ ಕಮ್ಯುನಿಸ್ಟ್ ಪಕ್ಷದ ಪೋಲಿಟ್‌ಬ್ಯೂರೋ ಸ್ಥಾಯಿ ಸಮಿತಿಯ ಸದಸ್ಯ ಕೈ ಕ್ವಿಯೊಂದಿಗೆ ಸಹ ವಿಶೇಷ ಸಭೆ ನಡೆಸಿದರು.

><><><><><><

ಎರಡು ದಿನಗಳ ಭೇಟಿಗಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಳೆ ಮೈಸೂರಿಗೆ ಆಗಮಿಸಲಿದ್ದು, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ನಂತರ ರಾಷ್ಟ್ರಪತಿಯವರು, ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರ ಆಹ್ವಾನದ ಮೇರೆಗೆ ರಾಷ್ಟ್ರಪತಿಯವರು ನಾಳಿದ್ದು ಮೈಸೂರು ಅರಮನೆಗೂ ಭೇಟಿ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ನಾಳೆ ಮತ್ತು ನಾಡಿದ್ದು ಮೈಸೂರು ಅರಮನೆಗೆ ಪ್ರವಾಸಿಗರ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

><><><><><><

ಇತ್ತೀಚಿನ ಮೇಘಸ್ಫೋಟಗಳು ಮತ್ತು ಪ್ರವಾಹಗಳಿಂದ ಉಂಟಾದ ಹಾನಿಯನ್ನು ಪರಿಶೀಲಿಸಲು ಹಾಗೂ ನಡೆಯುತ್ತಿರುವ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳನ್ನು ವಿಮರ್ಶಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಾಳೆ ಜಮ್ಮುವಿಗೆ ಭೇಟಿ ನೀಡಲಿದ್ದಾರೆ. ವೈಷ್ಣೋ ದೇವಿ ಯಾತ್ರಾ ಮಾರ್ಗದ ಸೆಫಾಗಾಂಗ್ ಪ್ರದೇಶದಲ್ಲಿ ಭೂಕುಸಿತಗಳಿಂದ ಹಲವರು ಪ್ರಾಣ ಕಳೆದುಕೊಂಡಿರುವ ಪರಿಸ್ಥಿತಿಯ ಕುರಿತು ಅವರು ಪರಿಶೀಲನೆ ನಡೆಸಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ, ಶಾ ಅವರು ಜಮ್ಮುವಿನ ಪ್ರವಾಹ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆಯನ್ನು ನಡೆಸಲಿದ್ದಾರೆ ಮತ್ತು ಅಧಿಕಾರಿಗಳು ಮತ್ತು ಪೀಡಿತ ಕುಟುಂಬಗಳೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ. ಪ್ರವಾಹ ಪರಿಹಾರ ಕ್ರಮಗಳನ್ನು ಚರ್ಚಿಸಲು ಮತ್ತು ನಿರ್ಣಯಿಸಲು ಅವರು ಜಮ್ಮುವಿನ ರಾಜಭವನದಲ್ಲಿ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

><><><><><><

ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಇ-ಆಡಳಿತ ವಿಭಾಗ, ಡಿಜಿಟಲ್ ಇಂಡಿಯಾ ಗುರಿ ಸಾಧಿಸುವತ್ತ ಮಹತ್ವದ ಮೈಲುಗಲ್ಲು ತಲುಪಿದೆ. ದೇಶದಾದ್ಯಂತ ಸುಮಾರು ೨, ಸಾವಿರ ಇ-ಸರ್ಕಾರ್ ಸೇವೆಗಳನ್ನು ಡಿಜಿಲಾಕರ್ ಮತ್ತು ಇ-ಡಿಸ್ಟ್ರಿಕ್ಟ್ ವೇದಿಕೆಗಳಲ್ಲಿ ಏಕೀಕೃತಗೊಳಿಸುವಲ್ಲಿ ಯಶಸ್ವಿಯಾಗಿದೆ. ಈ ಸಾಧನೆಯೊಂದಿಗೆ, ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ನಾಗರಿಕರು ಯಾವುದೇ ಸಮಯದಲ್ಲಿಯೇ ಪ್ರಮಾಣಪತ್ರಗಳು, ಕಲ್ಯಾಣ ಯೋಜನೆಗಳು, ಯುಟಿಲಿಟಿ ಪಾವತಿಗಳು ಮತ್ತು ಇತರೆ ನಾಗರಿಕ ಕೇಂದ್ರಿತ

ಸೇವೆಗಳನ್ನು ಸುಲಭವಾಗಿ ಹಾಗೂ ಸುವ್ಯವಸ್ಥಿತವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಇದರಿಂದ ಸೇವೆ ಪೂರೈಕೆಯಲ್ಲಿ ಸುಲಭತೆ ಮತ್ತು ಪಾರದರ್ಶಕತೆ ಖಚಿತವಾಗುತ್ತದೆ. ಮಹಾರಾಷ್ಟ್ರ ರಾಜ್ಯವು ೨೫೪ ಸೇವೆಗಳನ್ನು ನೀಡುವ ಮೂಲಕ ದೇಶದ ಮೊದಲ ಸ್ಥಾನದಲ್ಲಿದ್ದರೆ, ದೆಹಲಿ ೧೨೩, ಕರ್ನಾಟಕ ೧೧೩, ಅಸ್ಸಾಂ ೧೦೨ ಮತ್ತು ಉತ್ತರ ಪ್ರದೇಶ ೮೬ ಸೇವೆಗಳೊಂದಿಗೆ ಕ್ರಮವಾಗಿ ಸ್ಥಾನ ಪಡೆದುಕೊಂಡಿವೆ. ಒಟ್ಟಿನಲ್ಲಿ, ದೇಶದಾದ್ಯಂತ ನಾಗರಿಕರಿಗೆ ಈಗ ೧ ಸಾವಿರದ ೯೩೮ ಸೇವೆಗಳು ಲಭ್ಯವಿವೆ. ರಾಷ್ಟ್ರೀಯ ಇ-ಆಡಳಿತ ವಿಭಾಗ ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯ ಆಧಾರಿತ ವಿಧಾನಗಳ ಮೂಲಕ ಇ-ಆಡಳಿತ ಸೇವೆಗಳ ಸಹಯೋಗದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲು ಯೋಜನೆ ಹೊಂದಿದೆ.

><><><><><><><

ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯುತ್ತಿರುವ ಏಷ್ಯಾಕಪ್ ಪುರುಷರ ಹಾಕಿ ಪಂದ್ಯಾವಳಿಯಲ್ಲಿ ಭಾರತವು ಇಂದು ಸಂಜೆ ಜಪಾನ್ ತಂಡವನ್ನು ೩-೨ ರಿಂದ ಸೋಲಿಸಿತು. ಭಾರತ ಪರ ಹರಮನ್‌ಪ್ರೀತ್ ಸಿಂಗ್ ಎರಡು ಗೋಲುಗಳನ್ನು ಮತ್ತು ಮಂದೀಪ್ ಸಿಂಗ್ ಒಂದು ಗೋಲು ದಾಖಲಿಸಿದರು. ಜಪಾನ್ ಪರ, ಕೋಸೆ , ಕಾವಬೆ ಇಬ್ಬರೂ ಗೋಲುಗಳನ್ನು ಬಾರಿಸಿದರು. ಆರಂಭದಲ್ಲಿ ಚೀನಾ ತಂಡವು ಕಝಕಸ್ತಾನ್‌ನ್ನು ೧೩-೧ ರ ಭಾರಿ ಅಂತರದಿಂದ ಸೋಲಿಸಿತು. ಬಿಹಾರದಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಶಿಪ್‌ನ ವಿಜೇತ ತಂಡವು ೨೦೨೬ರ ಪುರುಷರ ಹಾಕಿ ವಿಶ್ವಕಪ್‌ಗೆ ಪ್ರವೇಶ ಪಡೆಯಲಿದೆ. ಭದ್ರತಾ ಕಾರಣಗಳಿಂದ ಪಾಕಿಸ್ತಾನ ಮತ್ತು ಆರ್ಥಿಕ ಸಮಸ್ಯೆಗಳ ಹಿನ್ನೆಲೆಯುಳ್ಳ ಓಮಾನ್ ತಂಡವು ಸ್ಪರ್ಧೆಯಿಂದ ಹಿಂದೆ ಸರಿದಿದ್ದು, ಅವುಗಳ ಬದಲಿಗೆ ಬಾಂಗ್ಲಾದೇಶ ಮತ್ತು ಕಝಕಸ್ತಾನ್ ತಂಡಗಳು ಭಾಗವಹಿಸುತ್ತಿವೆ.

><><><><><><><